ಹುಬ್ಬಳ್ಳಿ-ಧಾರವಾಡ ಹೊರವಲಯದ ರಸ್ತೆ

2025 - ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಬೈಪಾಸ್ ರಸ್ತೆಯ ಕಾಮಗಾರಿ ಎಂದು ಪ್ರಾರಂಭವಾಯಿತು.

ಆ) ಕಾಮಗಾರಿಗೆ ಆದ ಖರ್ಚು ಎಷ್ಟು?

ಇ) ಈಗ ಯಾವ ಹಂತದಲ್ಲಿದೆ?

ಈ) ಇನ್ನು ಎಷ್ಟು ದಿವಸಗಳಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಲಾಗುವುದು.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹುಬ್ಬಳ್ಳಿ-ಧಾರವಾಡ ಹೊರ ರಸ್ತೆಯ ಮೊದಲನೆ ಹಂತದ ನಿರ್ಮಾಣದ ಕಾಮಗಾರಿಯು 1987ರಲ್ಲಿ ಪ್ರಾರಂಭವಾಗಿರುತ್ತದೆ.

ಆ) ಸದರಿ ಕಾಮಗಾರಿಗೆ ಇದುವರೆಗೆ 516.68 ಲಕ್ಷ ರೂ.ಗಳು ಖರ್ಚಾಗಿರುತ್ತವೆ.

ಇ) ಹೊರ ರಸ್ತೆಯ ಮೊದಲನೆ ಹಂತದ ಜೆಲ್ಲಿ ಕಾಮಗಾರಿ ಬಹುತೇಕ ಪೂರೈಸಿದೆ.

ಈ) ಮೊದಲನೆ ಹಂತದ ಅರ್ಧ ರಸ್ತೆಯನ್ನು ವಾಹನ ಸಂಚಾರಕ್ಕೆ ತೆರವು ಮಾಡಲು ಡಾಂಬರೀಕರಣ ಮಾಡಬೇಕಿದೆ. ಕೇಂದ್ರ ಸರ್ಕಾರವು ಇಡೀ ಹೊರ ರಸ್ತೆಯನ್ನು ಬಿ.ಓ.ಟಿ. ಆಧಾರದಲ್ಲಿ ಕೈಗೊಳ್ಳುವ ಪ್ರಸ್ತಾವನೆಯನ್ನು ಪರಿಶೀಲಿಸುತ್ತಿರುವುದರಿಂದ ಡಾಂಬರೀಕರಣ ಮಾಡುವ ಅವಶ್ಯಕತೆ ಇಲ್ಲವೆಂದು ತಿಳಿಸಿದ್ದಾರೆ. ಈ ಬಗ್ಗೆ ಕೇಂದ್ರದೊಂದಿಗೆ ಪತ್ರ ವ್ಯವಹಾರ ಮಾಡಲಾಗುತ್ತಿದೆ. ಈ ಯೋಜನೆ ಪೂರ್ಣಗೊಳ್ಳುವುದು ಕೇಂದ್ರ ಸರ್ಕಾರದ ತೀರ್ಮಾನವನ್ನು ಅವಲಂಬಿಸಿದೆ.

ರಾಜ್ಯದಲ್ಲಿರುವ ಬೀಡಿ ಕಾರ್ಮಿಕರ ಸಂಖ್ಯೆ, ಕನಿಷ್ಠ ವೇತನ ಹಾಗೂ ಸೌಲಭ್ಯಗಳು

2283 - ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು?

ಆ) ಧಾರವಾಡ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು?

ಇ) ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಎಷ್ಟು ಬೀಡಿ ಕಂಪನಿಗಳು ಇವೆ. ಬೀಡಿ ಕಾರ್ಮಿಕರ ಸಂಖ್ಯೆ ಅವರ ಕನಿಷ್ಠ ವೇತನವೆಷ್ಟು?

ಈ) ಬೀಡಿ ಕಾರ್ಮಿಕರಿಗೆ ಸರ್ಕಾರದಿಂದ ಇರುವ ಸೌಲಭ್ಯಗಳು ಏನು?

ಉ) ಬೀಡಿ ಕಾರ್ಮಿಕರಿಗೆ ಗುರುತಿನ ಚೀಟಿಯನ್ನು ಒದಗಿಸಲಾಗಿದೆಯೇ?

ಶ್ರೀ ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು) :

ಅ) ಇಲಾಖೆಯಲ್ಲಿರುವ ಅಂಕಿ ಅಂಶಗಳ ಪ್ರಕಾರ 1996 ಜೂನ್ ಮಾಹೆಯ ಅಂತ್ಯಕ್ಕೆ ರಾಜ್ಯದಲ್ಲಿ ಬೀಡಿ ಕಾರ್ಮಿಕರ ಸಂಖ್ಯೆ 2,42,129 ಇದೆ. ಆದರೂ ಸಹಾ ಈ ಬಗ್ಗೆ ಹೊಸ ಸರ್ವೇಕ್ಷಣ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಇಲಾಖೆಯಲ್ಲಿರುವ ಅಂಕಿ ಅಂಶಗಳ ಪ್ರಕಾರ 1996 ಜೂನ್ ಮಾಹೆಯ ಅಂತ್ಯಕ್ಕೆ ಧಾರವಾಡ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರ ಸಂಖ್ಯೆ 5,741 ಇದೆ.

ಇ) ಶಿಗ್ಗಾಂವ ತಾಲ್ಲೂಕಿನಲ್ಲಿ 3 ಬೀಡಿ ಉದ್ಯಮಗಳಿದ್ದು ಅವುಗಳಲ್ಲಿ 154 ಬೀಡಿ ಕಾರ್ಮಿಕರಿದ್ದಾರೆ. ಸವಣೂರು ತಾಲ್ಲೂಕಿನಲ್ಲಿ 5 ಬೀಡಿ ಉದ್ಯಮಗಳಿದ್ದು ಅವುಗಳಲ್ಲಿ 393 ಬೀಡಿ ಕಾರ್ಮಿಕರಿದ್ದಾರೆ. ಈಗ ಜಾರಿಯಲ್ಲಿರುವ ಅಧಿಸೂಚನೆಯ ಪ್ರಕಾರ ಪ್ರತಿ ಸಾವಿರ ಬೀಡಿ ಸುತ್ತಲು ತುಟ್ಟಿಭತ್ಯೆ ಸೇರಿ ರೂ. 34-13 ಪೈಸೆ ಕನಿಷ್ಟ ವೇತನ ನಿಗದಿಪಡಿಸಲಾಗಿದೆ.

ಈ) ಬೀಡಿ ಕಾರ್ಮಿಕರಿಗೆ ರಾಜ್ಯ ಸರ್ಕಾರವು ಯಾವುದೇ ಸೌಲಭ್ಯಗಳನ್ನು ನೀಡುತ್ತಿಲ್ಲ, ಆದರೆ ಕೆಲವೊಂದು ಸೌಲಭ್ಯಗಳನ್ನು ಅಂದರೆ 1) ಆರೋಗ್ಯ 2) ವಸತಿ 3) ವಿದ್ಯಾಭ್ಯಾಸ ಮತ್ತು 4) ಮನರಂಜನೆ ಇವುಗಳನ್ನು ಕೇಂದ್ರ ಸರ್ಕಾರವು ಕೇಂದ್ರ ಕಲ್ಯಾಣ ಆಯುಕ್ತರವರ ಮೂಲಕ ಜಾರಿಗೊಳಿಸುತ್ತಿದೆ.

ಉ) ಹೌದು

ರಾಜ್ಯದಲ್ಲಿರುವ ನಿರುದ್ಯೋಗಿಗಳ ಸಂಖ್ಯೆ

2282 - ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ನಿರುದ್ಯೋಗಿಗಳ ಸಂಖ್ಯೆ ಎಷ್ಟು, ಅದರಲ್ಲಿ ಪುರುಷರ ಹಾಗೂ ಮಹಿಳೆಯರ ಸಂಖ್ಯೆ ಎಷ್ಟು?

ಆ) ಉದ್ಯೋಗ ವಿನಿಮಯ ಕಚೇರಿಯಲ್ಲಿ ನಿರುದ್ಯೋಗಿಗಳಿಗೆ ಯಾವ ಆಧಾರದ ಮೇಲೆ ಸಂದರ್ಶನಕ್ಕೆ ಕಳುಹಿಸಲಾಗುವುದು.

ಇ) ನಿರುದ್ಯೋಗ ಸಮಸ್ಯೆ ಬಗೆಹರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು) :

ಅ) ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಯಲ್ಲಿ 1996ನೇ ಮಾರ್ಚ್ ಅಂತ್ಯಕ್ಕೆ ಒಟ್ಟು 17,39,007 ಅಭ್ಯರ್ಥಿಗಳು ಉದ್ಯೋಗಾಕಾಂಕ್ಷಿಗಳಾಗಿದ್ದು, ಈ ಪೈಕಿ 13,66,303 ಪುರುಷರು ಹಾಗೂ 3,72,704 ಮಹಿಳೆಯರು ಆಗಿರುತ್ತಾರೆ.

ಆ) ಉದ್ಯೋಗ ವಿನಿಮಯ ಕೇಂದ್ರಗಳಿಗೆ ಸರ್ಕಾರಿ ವಲಯದ ನಿಯೋಜಕರಿಂದ ಅಧಿಸೂಚಿಸಲ್ಪಟ್ಟ ಹುದ್ದೆಗಳಿಗೆ ನಿಯೋಜಕರು ನಿಗಧಿಗೊಳಿಸಿದ ಅರ್ಹತೆಗಳು ಅಂದರೆ ವಿದ್ಯಾರ್ಹತೆ, ವಯೋಮಿತಿ, ಮೀಸಲಾತಿ ಇವುಗಳ ಆಧಾರ ಅರ್ಹ ಅಭ್ಯರ್ಥಿಗಳನ್ನು ನೋಂದಣಿ ಜೇಷ್ಠತೆ ಮೇರೆಗೆ ಆಯ್ಕೆ ಮಾಡಿ ನಿಗದಿತ ಪ್ರಮಾಣದಲ್ಲಿ ಪುರಸ್ಕರಣೆ ಮಾಡಲಾಗುವುದು.

ಖಾಸಗಿ ವಲಯದ ಹುದ್ದೆಗಳಿಗೆ ಅರ್ಹತೆ ಮಾತ್ರ ಆಧಾರವಾಗಿದ್ದು ಮೇಲೆ ತಿಳಿಸಿದ ಇತರ ನಿಬಂಧನೆಗಳಿರುವುದಿಲ್ಲ.

ಇ) ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ರಾಜ್ಯ ಸರ್ಕಾರದಿಂದ ಹಲವಾರು ಕೇಂದ್ರ ಪುರಸ್ಕೃತ ಹಾಗೂ ರಾಜ್ಯ ಯೋಜನಾ ಕಾರ್ಯಕ್ರಮಗಳನ್ನು ನಿರುದ್ಯೋಗ ಕಡಿಮೆಗೊಳಿಸುವ ದಿಸೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.